# ನಾಗರಿಕ ಸಮಾಜದಲ್ಲಿ ಮಹಿಳಾ ರಾಜಕೀಯ ಭಾಗವಹಿಸುವಿಕೆ ಮತ್ತು ಸಬಲೀಕರಣ

**ಆದರ್ಶ ಎಂ.ಎ.[1] & ನಾಗರಾಜು ಎನ್.[2]**

[1]ಸಂಶೋಧನಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

[2]ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

**DOI: https://doi.org/10.5281/zenodo.18845233**

## ABSTRACT:

ನಾಗರಿಕ ಸಮಾಜದಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಮತ್ತು ಸಬಲೀಕರಣವು ಕೇವಲ ಲಿಂಗ ಸಮಾನತೆಯ ವಿಷಯವಲ್ಲ, ಅದು ಸದೃಢ ಪ್ರಜಾಪ್ರಭುತ್ವದ ಅಡಿಪಾಯವಾಗಿದೆ. ರಾಜಕೀಯ ವ್ಯವಹಾರಗಳಲ್ಲಿ ನಾಗರಿಕರ ಸಕ್ರಿಯ ಭಾಗವಹಿಸುವಿಕೆಯು ಪ್ರಜಾಪ್ರಭುತ್ವದ ರಚನೆಯನ್ನು ಬಲಪಡಿಸುತ್ತದೆ. ರಾಜಕೀಯ ಭಾಗವಹಿಸುವಿಕೆಯು ಪ್ರಜಾಪ್ರಭುತ್ವ ವ್ಯವಸ್ಥೆಯ ವಿಶಿಷ್ಟ ಲಕ್ಷಣವಾಗಿದ್ದು ಅದರ ಪರಿಣಾಮಕಾರಿತ್ವವು ಅದರ ಎಲ್ಲಾ ನಾಗರಿಕರಿಗೆ ಸಮಾನ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆಯನ್ನು ಎಷ್ಟರಮಟ್ಟಿಗೆ ಒದಗಿಸಲಾಗಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಮಹಿಳಾ ಸಬಲೀಕರಣವು ಇಂದು ಬಹು ಆಯಾಮದ ಪರಿಕಲ್ಪನೆಯಾಗಿ ರೂಪಗೊಂಡಿದ್ದು, ಸಮಾಜದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಮಹಿಳೆಯರು ತಮ್ಮ ಜೀವನದ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳುವಂತೆ ಅವರಿಗೆ ಶಕ್ತಿ ತುಂಬುವ ಪ್ರಕ್ರಿಯೆ ಮಾತ್ರ ಸಬಲೀಕರಣವಲ್ಲ; ಬದಲಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಉದ್ಯೋಗ, ಆರೋಗ್ಯ ಮೊದಲಾದ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರನ್ನು ಪುರುಷನಷ್ಟೇ ಸಮಬಲರನ್ನಾಗಿಸುವುದೇ ಮಹಿಳಾ ಸಬಲೀಕರಣವೆನಿಸಿಕೊಳ್ಳುತ್ತದೆ. ನಾಗರಿಕ ಸಮಾಜವು ತನ್ನೆಲ್ಲ ನಾಗರಿಕರಿಗೆ ಯಾವುದೇ ವರ್ಗ ಭೇದವಿಲ್ಲದೆ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಒದಗಿಸುವಂಥದ್ದು. ಇದು ಸರ್ಕಾರೇತರ ಸಂಘಟನೆಗಳ ಸಮೂಹವಾಗಿದ್ದು, ನಾಗರಿಕರ ಕುಂದು ಕೊರತೆಗಳನ್ನು ಸರ್ಕಾರದ ಎದುರು ತಂದು ಅವುಗಳನ್ನು ಪರಿಹರಿಸುವಂತೆ ಒತ್ತಡ ಹೇರುತ್ತದೆ. ಮುಕ್ತ ಅವಕಾಶಗಳನ್ನು ನೀಡುವ ಮೂಲಕ ಎಲ್ಲರನ್ನು ಸಬಲೀಕರಣದತ್ತ ಮುನ್ನಡೆಸುವ ಕೆಲಸ ಮಾಡುತ್ತದೆ. ಜಾನ್ ಲಾಕ್‌ರವರು 'ನಾಗರಿಕ ಸಮಾಜವು ಸಾಮಾಜಿಕ ಒಪ್ಪಂದದ ಪದವಾಗಿ ವ್ಯಕ್ತಿಗಳ ನೈಸರ್ಗಿಕ ಹಕ್ಕುಗಳನ್ನು ರಕ್ಷಿಸಲು ಉಂಟಾದ ವ್ಯವಸ್ಥೆಯಾಗಿದೆ' ಎಂದಿದ್ದಾರೆ.

ನಾಗರಿಕ ಸಮಾಜವು ಸರ್ಕಾರದ ಹೊರತಾಗಿ ಕಾರ್ಯ ನಿರ್ವಹಿಸುವ ಸಾಮಾಜಿಕ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು, ಮಹಿಳಾ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಮಾಧ್ಯಮಗಳು, ಜನಾಂದೋಲನಗಳು ಇತ್ಯಾದಿಗಳ ಸಮೂಹವಾಗಿದೆ. ಈ ನಾಗರಿಕ ಸಮಾಜವು ಮಹಿಳೆಯರ ಧ್ವನಿಯನ್ನು ರಾಜಕೀಯ ವ್ಯವಸ್ಥೆಯತ್ತ ಕೊಂಡೊಯ್ಯುವ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತದೆ. ನಾಗರಿಕ ಸಮಾಜದ ಸಂಸ್ಥೆಗಳು ಮಹಿಳೆಯರಿಗೆ ತರಬೇತಿ, ಕಾನೂನಿನ ಅರಿವು ಮತ್ತು ನೆರವು, ರಾಜಕೀಯ ಜ್ಞಾನ ಮತ್ತು ಸಾಮಾಜಿಕ ಜಾಲಗಳನ್ನು ಒದಗಿಸುವ ಮೂಲಕ ಅವರನ್ನು ಸಬಲೀಕರಿಸುತ್ತವೆ. ಮಹಿಳಾ ಸಬಲೀಕರಣದಲ್ಲಿ ಸಕ್ರಿಯ ರಾಜಕೀಯ ಭಾಗವಹಿಸುವಿಕೆಯು ಮಹತ್ವಪೂರ್ಣವಾಗಿದ್ದು, ಅವರ ರಾಜಕೀಯ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಸಲುವಾಗಿ ರಾಜಕೀಯ ಅವಕಾಶಗಳನ್ನು, ಹಕ್ಕುಗಳನ್ನು, ರಾಜಕೀಯ ಮೀಸಲಾತಿಯನ್ನು ಸಂವಿಧಾನಬದ್ಧವಾಗಿ ನೀಡಲಾಗಿದೆ. ವಿಕಸಿತ ಭಾರತವನ್ನು ಸಾಧಿಸುವ ಪ್ರೇರಕ ಶಕ್ತಿಯಾಗಿ ಮಹಿಳೆಯರ ಸಕ್ರಿಯ ರಾಜಕೀಯ ಭಾಗವಹಿಸುವಿಕೆ ಮತ್ತು ಸಬಲೀಕರಣವು ಮಹತ್ವದ ಸ್ಥಾನ ಪಡೆಯುತ್ತದೆ.

"ಪ್ರಧಾನಿ ನರೇಂದ್ರ ಮೋದಿಯವರು ವಿಕಸಿತ ಭಾರತದ ದೃಷ್ಟಿಕೋನಕ್ಕೆ ಮಹಿಳೆಯರ ಸಂಪೂರ್ಣ ಮತ್ತು ಸಮಾನ ಒಳಗೊಳ್ಳುವಿಕೆಯ ಅಗತ್ಯವಿದೆ ಎಂದಿದ್ದಾರೆ."

**KEYWORDS:**

ನಾಗರಿಕ ಸಮಾಜ, ರಾಜಕೀಯ ಭಾಗವಹಿಸುವಿಕೆ, ಮಹಿಳಾ ಸಬಲೀಕರಣ, ವಿಕಸಿತ ಭಾರತದ ದೃಷ್ಟಿಕೋನ, ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಮಹಿಳಾ ಸಬಲೀಕರಣ, ಸಂವಿಧಾನಾತ್ಮಕ ಕಾನೂನುಗಳು.

**ಪರಿಚಯ:**

ಪ್ರಜಾಪ್ರಭುತ್ವದ ಗುಣಮಟ್ಟವನ್ನು ಅಳೆಯುವ ಪ್ರಮುಖ ಮಾನದಂಡಗಳಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಪ್ರಮುಖವಾದದ್ದು. ನಾಗರಿಕ ಸಮಾಜವು ಸರ್ಕಾರೇತರ ಸಾಮಾಜಿಕ ಕ್ಷೇತ್ರವಾಗಿದ್ದು ಮಹಿಳೆಯರ ಧ್ವನಿಯನ್ನು ರಾಜಕೀಯ ವ್ಯವಸ್ಥೆಯತ್ತ ಕೊಂಡೊಯ್ಯುವ ಸೇತುವೆಯಂತೆ ಕಾರ್ಯನಿರ್ವಹಿಸುತ್ತದೆ. ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಮತ್ತು ಸಬಲೀಕರಣವು ಕೇವಲ ಪ್ರಾತಿನಿಧ್ಯವಷ್ಟೇ ಅಲ್ಲ ನಿರ್ಧಾರಾತ್ಮಕ ಶಕ್ತಿ, ಸಂಪನ್ಮೂಲಗಳ ನಿಯಂತ್ರಣ ಮತ್ತು ಸಾರ್ವಜನಿಕ ಜೀವನದಲ್ಲಿ ಸಮಾನ ಹಕ್ಕುಗಳನ್ನು ಪಡೆಯುವುದಕ್ಕೆ ಸಂಬಂಧಿಸಿದೆ. ಮಹಿಳೆಯರ ಹಕ್ಕುಗಳು, ಅವಕಾಶಗಳು, ಅವರ ಸಬಲೀಕರಣಕ್ಕೆ ಅನೇಕ ಸ್ತ್ರೀ ಚಳುವಳಿಗಳು ಬೆಳೆದು ಬಂದವು. ಈ ಚಳುವಳಿಗಳ ಮೂಲವಾಗಿ ಸ್ತ್ರೀವಾದ (Feminism) ಬೆಳೆದು ಬಂದಿತು. ಮುಂದುವರೆದು ಸ್ತ್ರೀವಾದದ ಅನೇಕ ಕವಲುಗಳಲ್ಲಿ ಒಂದಾದ 'ಲಿಬರಲ್ ಫೆಮಿನಿಸಂ' (Liberal feminism) ಮಹಿಳೆಯರಿಗೆ ಪುರುಷರಷ್ಟೇ ಸಮಾನ ಹಕ್ಕು ಮತ್ತು ಅವಕಾಶಗಳು ಮತ್ತು ಸ್ಥಾನಮಾನಗಳು ದೊರೆಯಬೇಕು ಎಂದು ಹೇಳುವುದರ ಜೊತೆಗೆ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪ್ರವೇಶಕ್ಕೆ ಶಿಕ್ಷಣ, ಕಾನೂನು ರಕ್ಷಣೆ, ಮತ್ತು ಸಮಾನ ಪ್ರತಿನಿಧಿತ್ವವು ಅವಶ್ಯಕವಾದವುಗಳೆಂದು ವಾದಿಸುತ್ತದೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತದಲ್ಲಿ ಮಹಿಳೆಯರು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳನ್ನು ಸರಿಯಾಗಿ ಗ್ರಹಿಸಿ ಅವುಗಳ ನಿವಾರಣೆಗಾಗಿ ಸಂವಿಧಾನಾತ್ಮಕ ಕ್ರಮ ಕೈಗೊಂಡರು. ಸಂವಿಧಾನ ರಚನೆಯ ಸಮಯದಲ್ಲಿ 'ಹಿಂದೂ ಸಂಹಿತೆ ಮಸೂದೆ', ಮಹಿಳೆಯರ ಹಕ್ಕುಗಳು, ಅವಕಾಶಗಳ ಕುರಿತು ಸಮಗ್ರವಾಗಿ ಚಿಂತಿಸಿ ಸಂವಿಧಾನದ ಮೂಲಕ ಅನೇಕ ಸವಲತ್ತುಗಳನ್ನು ರೂಪಿಸಿ ಮಹಿಳೆಯರ ಸಬಲೀಕರಣಕ್ಕೆ ಮುಂದಾದರು.

ಭಾರತೀಯ ಮಹಿಳೆಯರ ಸಮಸ್ಯೆಗಳನ್ನು ಕೇವಲ ಸೈದ್ಧಾಂತಿಕವಾಗಿ ವಿವರಿಸದೆ ಅವುಗಳನ್ನು ಪ್ರಾಯೋಗಿಕವಾಗಿ ಕಂಡು ಅವುಗಳನ್ನು ಪರಿಹರಿಸಿ ಸ್ತ್ರೀ ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ ಏಕೈಕ ದಾರ್ಶನಿಕ ಡಾ. ಬಿ.ಆರ್. ಅಂಬೇಡ್ಕರ್ ರವರು ಮಾತ್ರ. ಶಿಕ್ಷಣ, ಉದ್ಯೋಗ, ಆರ್ಥಿಕ, ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನೀಡುವ ಮೂಲಕ ಮಹಿಳೆಯರನ್ನು ಬಲಪಡಿಸುವ ಕೆಲಸ ಮಾಡಿದರು. ಇನ್ನು ನಾಗರಿಕ ಸಮಾಜದ ಸಂಸ್ಥೆಗಳಾದ ಸ್ವಯಂ ಸೇವಾ ಸಂಘಗಳು (NGOs), ಮಹಿಳಾ ಸಂಘಟನೆಗಳು, ಸ್ವಸಹಾಯ ಗುಂಪುಗಳು, ಸಾಮಾಜಿಕ ಚಳುವಳಿಗಳು, ಮಾಧ್ಯಮಗಳು ಸಾರ್ವಜನಿಕ ವಲಯದಲ್ಲಿ ಮಹಿಳೆಯರ ಧ್ವನಿಯಾಗುವ ಮೂಲಕ ಅವರ ಸಬಲೀಕರಣಕ್ಕೆ ಮಾರ್ಗಗಳಾಗಿವೆ. ರಾಜಕೀಯವಾಗಿ ಮಹಿಳೆಯರು ಇಂದು ಸ್ಥಳೀಯ ಮಟ್ಟದಿಂದ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದವರೆಗೂ ಸಕ್ರಿಯವಾಗಿ ಭಾಗವಹಿಸುವ ಮೂಲಕ ಹೊಸ ಛಾಪು ಮೂಡಿಸಿರುವುದು

ಸಾಮಾಜಿಕ ಪರಿವರ್ತನೆಯ ಶಕ್ತಿಯುತ ಸಾಧನವಾಗಿದೆ. ಮಹಿಳೆಯರನ್ನು ರಾಜಕೀಯ ಅಂಚಿನಿಂದ ಕ್ಷೇತ್ರದೆಡೆಗೆ ತರಲು ಅವರ ರಾಜಕೀಯ ಸಕ್ರಿಯ ಭಾಗವಹಿಸುವಿಕೆಯು ಅಗತ್ಯವಾಗಿದೆ. ಭಾರತವು 2047ರ ಹೊತ್ತಿಗೆ ಅಭಿವೃದ್ಧಿ ಸಾಧಿಸಲು ಹೊಂದಿರುವ ವಿಕಸಿತ ಭಾರತದ ದೃಷ್ಟಿಯು ಕೇವಲ ಆರ್ಥಿಕ ಬೆಳವಣಿಗೆಯ ಗುರಿಯನ್ನು ಹೊಂದಿಲ್ಲ. ಅದು ಸಾಮಾಜಿಕ ನ್ಯಾಯ, ಸಮಾನ ಅವಕಾಶಗಳು, ಮತ್ತು ಒಳಗೊಳ್ಳುವ ಪ್ರಜಾಪ್ರಭುತ್ವ ಎಂಬ ಮೌಲ್ಯಗಳ ಮೇಲೆ ಆಧಾರಿತವಾಗಿದೆ. ಈ ಪರಿಕಲ್ಪನೆಯು ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಮತ್ತು ಸಬಲೀಕರಣವನ್ನು ತನ್ನ ನಾಲ್ಕು ಆಧಾರ ಸ್ತಂಭಗಳಲ್ಲಿ ಒಂದನ್ನಾಗಿ ಪರಿಗಣಿಸಿದೆ (ವಿಕಸಿತ ಭಾರತದ ಪರಿಕಲ್ಪನೆಯ ನಾಲ್ಕು ಆಧಾರ ಸ್ತಂಭಗಳು: ಯುವ ಜನತೆ, ಬಡವರು, ಮಹಿಳೆಯರು, ರೈತಾಪಿ ವರ್ಗ). ಮಹಿಳೆಯರಿಗೆ ಮುಕ್ತ ಆಯ್ಕೆಗಳ ಸ್ವಾತಂತ್ರ್ಯವನ್ನು ಕಲ್ಪಿಸುವ ಮೂಲಕ ಅವರನ್ನು ಸಬಲರನ್ನಾಗಿ ಮಾಡಬಹುದು.

**ಸಾಹಿತ್ಯ ಪರಾಮರ್ಶೆ:**

ಡಾ. ಬಿ.ಆರ್. ಅಂಬೇಡ್ಕರ್ ಅವರು ಸ್ತ್ರೀವಾದಿ ಮತ್ತು ಲಿಂಗ ಸಮಾನತೆಯ ಪ್ರತಿಪಾದಕರಾಗಿ ಮಹಿಳೆಯರ ವಿಮೋಚನೆಗಾಗಿ ಹೋರಾಟ ಮಾಡಿದಷ್ಟೇ ಅಲ್ಲದೆ, ಮಹಿಳಾ ಸಬಲೀಕರಣಕ್ಕಾಗಿ ಅವಿರತವಾಗಿ ಶ್ರಮಿಸಿದರು. ಸ್ವತಂತ್ರ ಭಾರತದ ಆಶಯಗಳು, ಆಧುನಿಕ ಸಮಾಜದ ಸಮಾನತೆಯ ಪರಿಕಲ್ಪನೆಗೆ ಹೊಂದಿಕೊಳ್ಳುವಂತಹ 'ಹಿಂದೂ ಕಾನೂನು ಸಂಹಿತೆ'ಯನ್ನು ಫೆಬ್ರವರಿ 24, 1949 ರಂದು ಸದನದಲ್ಲಿ ಮಂಡಿಸಿದರು. ಆದರೆ 1949 ರಿಂದ 1951 ರವರೆಗೆ ಎರಡು ವರ್ಷಗಳ ಕಾಲ ನೆನೆಗುದಿಗೆ ಬಿದ್ದಿದ್ದ ಮಸೂದೆಯನ್ನು ಕೊನೆಗೆ 1951ರಲ್ಲಿ ಹಿಂತೆಗೆದುಕೊಳ್ಳಲಾಯಿತು. ಈ ವಿದ್ಯಮಾನದಿಂದ ತೀವ್ರವಾಗಿ ಮನನೊಂದ ಡಾ. ಅಂಬೇಡ್ಕರ್‌ರವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಸದನದಿಂದ ಹೊರಬಂದರು. ಇದು ಅಂಬೇಡ್ಕರ್‌ರವರು ಮಹಿಳಾ ಸಬಲೀಕರಣದ ಕುರಿತು ಹೊಂದಿದ್ದ ಬದ್ಧತೆಯನ್ನು ತಿಳಿಸುತ್ತದೆ. (ಡಾ. ಬಿ.ಆರ್.ಅ. ಸ.ಬ.ಭಾ. ಸಂ 15).

ಆಧುನಿಕ ಭಾರತ ಹಾಗೂ ಅಭಿವೃದ್ಧಿ ಭಾರತದ ಕನಸು ಕಂಡಿದ್ದ ಮಹಾನ್ ಸಂತ ಡಾ. ಬಿ.ಆರ್. ಅಂಬೇಡ್ಕರ್ ಅವರು ಭಾರತೀಯ ಸಾಮಾಜಿಕ ವ್ಯವಸ್ಥೆಯ ಅಮೂಲಾಗ್ರ ಬದಲಾವಣೆಗೆ ಶ್ರಮಿಸಿದರು. ಜಾತಿ ವಿನಾಶ, ಕ್ರಾಂತಿ ಮತ್ತು ಪ್ರತಿಕ್ರಾಂತಿ, ಹಿಂದೂ ಸಂಹಿತೆ ಮಸೂದೆ, ಪ್ರಭುತ್ವ ಮತ್ತು ಅಲ್ಪಸಂಖ್ಯಾತರು ಮೊದಲಾದ ಅವರ ವಿಚಾರಗಳನ್ನು ತಿಳಿಯಲು ಈ ಕೃತಿ ನೆರವಾಗಿದೆ. (ಡಾ. ಎಸ್. ಜಾಫೆಟ್ 2017 ಅಂಬೇಡ್ಕರ್ ಅವರ ಚಿಂತನೆಗಳ ಪ್ರವೇಶಿಕೆ).

Shirur, S. S. (2023). Dr. B. R. Ambedkar's role in women empowerment. International Journal for Multidisciplinary Research (IJFMR), 5(4). doi.org. ಈ ಲೇಖನವು ಮಹಿಳಾ ಹಕ್ಕುಗಳ ಪ್ರತಿಪಾದಕರಾದ ಡಾ. ಅಂಬೇಡ್ಕರ್ ಅವರು ಭಾರತೀಯ ಮಹಿಳೆಯರ ಹಲವಾರು ಸಮಸ್ಯೆಗಳನ್ನು ಚರ್ಚಿಸುವ ಮೂಲಕ ಬಾಂಬೆ ಶಾಸಕಾಂಗ ಮಂಡಳಿ, ವೈಸರಾಯ್ ಅಸೆಂಬ್ಲಿಯಲ್ಲಿ, ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿ ಮತ್ತು ಸ್ವತಂತ್ರ ಭಾರತದ ಮೊದಲ ಕಾನೂನು ಸಚಿವರಾಗಿ ಸಂಸತ್ತಿನಲ್ಲಿ ಮಹಿಳೆಯರ ಸಬಲೀಕರಣಕ್ಕೆ ನಡೆಸಿದ ಹೋರಾಟವನ್ನು ವಿವರಿಸುತ್ತದೆ. ಮಹಿಳಾ ಸಮುದಾಯದ ಪ್ರಗತಿಗೆ ಅಂಬೇಡ್ಕರ್ ಹೊಂದಿದ್ದ ಮಾನವೀಯ ಚಿಂತನೆಗಳನ್ನು, ಕಾನೂನುಬದ್ಧವಾಗಿ ಮಹಿಳೆಯರಿಗೆ ಹಕ್ಕುಗಳು, ಅವಕಾಶಗಳು, ಸೌಲಭ್ಯಗಳನ್ನು

ನೀಡಿರುವುದನ್ನು ಮತ್ತು ಒಟ್ಟಾರೆಯಾಗಿ ಭಾರತೀಯ ಮಹಿಳೆಯರ ಸಬಲೀಕರಣದಲ್ಲಿ ಡಾ. ಅಂಬೇಡ್ಕರ್‌ರವರು ವಹಿಸಿದ ಮಹತ್ವದ ಪಾತ್ರವನ್ನು ವಿಶ್ಲೇಷಿಸಲು ಈ ಸಾಹಿತ್ಯವು ನೆರವಾಗಿದೆ.

Empowerment of women through political participation in India. Zamir Hussain Naik. International Journal of Academic Research and Development, ISSN: 2455–4197 (2017) Page No. 728–731. ರಾಜಕೀಯ ಭಾಗವಹಿಸುವಿಕೆಯು ಪ್ರಜಾಪ್ರಭುತ್ವ ವ್ಯವಸ್ಥೆಯ ವಿಶಿಷ್ಟ ಲಕ್ಷಣವಾಗಿದ್ದು, ಮಹಿಳೆಯರ ಸಬಲೀಕರಣದ ಪ್ರಕ್ರಿಯೆಯಲ್ಲಿ ರಾಜಕೀಯ ಭಾಗವಹಿಸುವಿಕೆಯ ಮಹತ್ವವನ್ನು ತಿಳಿಯಲು, ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ, ಅವರಿಗಿರುವ ಹಕ್ಕುಗಳು, ಅವಕಾಶಗಳು, ಮಹಿಳೆಯರಿಗೆ ನೀಡಿದ ಸಂವಿಧಾನಾತ್ಮಕ ಮೀಸಲಾತಿಯನ್ನು ಪರಿಶೀಲಿಸಲು ಈ ಸಾಹಿತ್ಯವು ಪೂರಕವಾಗಿದೆ.

Women Empowerment and Gender Equality in India: A Strategic Imperative for Viksit Bharat. Dr. Sanjeet Singh, Dr. Sanjeev Kumar. International Journal of Advance and Applied Research, ISSN – 2347–7075 Vol. 12 No. 4 Mar–Apr 2025. ಅಭಿವೃದ್ಧಿ ಹೊಂದಿದ ಮತ್ತು ಎಲ್ಲರನ್ನೂ ಒಳಗೊಂಡ ರಾಷ್ಟ್ರದ ಪ್ರಗತಿಗಾಗಿ ಭಾರತ ಹೊಂದಿರುವ ವಿಕಸಿತ ಭಾರತ 2047ನ್ನು ಸಾಧಿಸಲು ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆಯು ನಿರ್ಣಾಯಕವಾದವುಗಳು. ಮಹಿಳೆಯರು ಲಿಂಗ ಅಸಮಾನತೆ, ಆರ್ಥಿಕ ಅವಲಂಬನೆ, ಸಾಮಾಜಿಕ ಅಡೆತಡೆಗಳು ಮೊದಲಾದವುಗಳನ್ನು ಮೀರಿ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಗತಿ ಸಾಧಿಸಿರುವ ಮತ್ತು ಸಾಧಿಸುತ್ತಿರುವ ಪರಿಯನ್ನು ಗುರುತಿಸಲು, ಲಿಂಗ ಅಸಮಾನತೆಯನ್ನು ಹೋಗಲಾಡಿಸಿ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣವನ್ನು ಸಾಧಿಸುವ ಮೂಲಕ ವಿಕಸಿತ ಭಾರತದ ಗುರಿಯನ್ನು ಸಾಧಿಸಲು ಇರುವ ಮಾರ್ಗಗಳನ್ನು ಈ ಸಾಹಿತ್ಯ ವಿವರಿಸುತ್ತದೆ.

Dr. B. R. Ambedkar's Vision for Women Empowerment, Dr. Minara Yeasmin (IJGRT) April 2018 ISSN: 2320–2882. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಮಹಿಳಾ ಸಬಲೀಕರಣಕ್ಕೆ ಅಗತ್ಯ ಅಂಶಗಳಾದ ಲಿಂಗ ಸಮಾನತೆ, ರಾಜಕೀಯ ನಾಯಕತ್ವ, ಮಹಿಳಾ ಕೇಂದ್ರಿತ ಅಭಿವೃದ್ಧಿ, ಆರ್ಥಿಕ ಸ್ವಾತಂತ್ರ್ಯ, ಶಿಕ್ಷಣ, ಸಮಾನತೆಗಳನ್ನು ಸಮಾಜದಲ್ಲಿ ಸಾಧಿಸಿದಾಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ ಎಂದರು. ಅವರ ಸಬಲೀಕರಣಕ್ಕಾಗಿ ಸಂವಿಧಾನಾತ್ಮಕ ಅವಕಾಶಗಳನ್ನು ಮತ್ತು ಮೀಸಲಾತಿಯನ್ನು ನೀಡುವ ಮೂಲಕ ಸಮಾಜದಲ್ಲಿ ಗೌರವಯುತ ಜೀವನವನ್ನು ನಡೆಸಲು ಅವಶ್ಯಕ ಮಾನವೀಯ ವಾತಾವರಣವನ್ನು ನಿರ್ಮಿಸಿದರು. ಮಹಿಳಾ ಶಿಕ್ಷಣಕ್ಕೆ ಅವರು ನೀಡಿದ ಮಹತ್ವವನ್ನು ಮತ್ತು ಅವರ ದೃಷ್ಟಿಯಲ್ಲಿ ಮಹಿಳಾ ಸಬಲೀಕರಣವೆಂದರೇನು ಎಂಬುವುದನ್ನು ವಿಮರ್ಶಿಸಲು ಈ ಸಾಹಿತ್ಯವು ಪೂರಕವಾಗಿದೆ.

WOMEN'S EMPOWERMENT: A KEY KEY TO ACHIEVING VIKSIT BHARAT 2047, 1. Mrs. Jyoti 2. Ms. Shashi, International Journal of Education and Science Research Review Volume–12, Issue–2 March–April–2025 E–ISSN 2348–6457. ಈ ಲೇಖನವು ಮಹಿಳಾ ಸಬಲೀಕರಣ ಹೇಗೆ

ವಿಕಸಿತ ಭಾರತದ ಗುರಿ ಸಾಧನೆಯ ಅಡಿಪಾಯವಾಗಿದೆ ಎಂಬುದನ್ನು ವಿಶ್ಲೇಷಿಸುತ್ತದೆ. ಶಿಕ್ಷಣ, ಆರ್ಥಿಕ ತೊಡಗಿಕೊಳ್ಳುವಿಕೆ, ರಾಜಕೀಯ ನಾಯಕತ್ವ, ಆರೋಗ್ಯ ರಕ್ಷಣೆ ಮತ್ತು ಡಿಜಿಟಲ್ ಪ್ರವೇಶದಂತಹ ವಿವಿಧ ಕ್ಷೇತ್ರಗಳಲ್ಲಿ ಲಿಂಗ ಸಮಾನತೆಯನ್ನು ಸಾಧಿಸುವ ಅಗತ್ಯತೆಯನ್ನು ತಿಳಿಸುತ್ತದೆ. ಪ್ರಸ್ತುತ ಸರ್ಕಾರಗಳ ನೀತಿ ಮತ್ತು ಯೋಜನೆಗಳು ಮಹಿಳಾ ಸಬಲೀಕರಣವನ್ನು ಗುರಿಯಾಗಿಸಿಕೊಂಡು ಜಾರಿಗೊಳಿಸುತ್ತಿರುವುದನ್ನು, ಮಹಿಳೆಯರ ಸಬಲೀಕರಣವನ್ನು ಸಾಧಿಸುವುದಕ್ಕೆ ಎಲ್ಲಾ ಕ್ಷೇತ್ರಗಳಲ್ಲಿ ಅವರಿಗೆ ನೀಡಿರುವ ಅವಕಾಶಗಳನ್ನು ತಿಳಿಯಲು ಈ ಸಾಹಿತ್ಯ ನೆರವಾಗಿದೆ.

**ಅಧ್ಯಯನದ ಉದ್ದೇಶಗಳು:**

1. ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಮತ್ತು ಸಬಲೀಕರಣಕ್ಕೆ ಡಾ. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನೀಡಿದ ಮಾರ್ಗೋಪಾಯಗಳನ್ನು ಗುರುತಿಸುವುದು.
2. ವಿಕಸಿತ ಭಾರತದ ಸಾಧನೆಯಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಮತ್ತು ಸಬಲೀಕರಣದ ಮಹತ್ವವನ್ನು ಗುರುತಿಸುವುದು.

**ಅಧ್ಯಯನದ ವಿಧಾನ:**

ಪ್ರಸ್ತುತ ಅಧ್ಯಯನವು ದ್ವಿತೀಯ ದತ್ತಾಂಶಗಳ ಮೇಲೆ ಅವಲಂಬಿತವಾಗಿದ್ದು, ವಿದ್ಯುತ್ಪೂರ್ಣ ಸಾಹಿತ್ಯ ಬರಹಗಳು, ನಿಯತಕಾಲಿಕೆಗಳು, ಸಂಶೋಧನಾ ಲೇಖನಗಳು, ಪುಸ್ತಕಗಳು, ಸರ್ಕಾರದ ವರದಿಗಳು ಮತ್ತು ಅಂತರ್ಜಾಲದ ಮೂಲಗಳಿಂದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

**ಅಧ್ಯಯನದ ಮಹತ್ವ:**

‘‘ಮಹಿಳೆಯರು ಸಾಧಿಸುವ ಪ್ರಗತಿಯ ಮಟ್ಟದಿಂದ ನಾನು ಸಮುದಾಯದ ಪ್ರಗತಿಯನ್ನು ಅಳೆಯುತ್ತೇನೆ – ಡಾ. ಬಿ.ಆರ್. ಅಂಬೇಡ್ಕರ್’’ (Dr Sunanda S Shirur. IJFMR. E–ISSN–2582–2160) ಎಂದು ಹೇಳುವ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದರು. ನೆಹರು ಅವರು ಸಹ ಇದೇ ರೀತಿಯ ನಿಲುವು ಹೊಂದಿದ್ದರು: ‘‘ರಾಷ್ಟ್ರದ ಉನ್ನತಿಗಾಗಿ ಮಹಿಳೆಯರನ್ನು ಉನ್ನತೀಕರಿಸಬೇಕು, ಏಕೆಂದರೆ ಮಹಿಳೆ ಉನ್ನತಿಯಾದರೆ ಸಮಾಜ ಮತ್ತು ರಾಷ್ಟ್ರವು ಉನ್ನತಿ ಹೊಂದುತ್ತದೆ’’ ಎಂದಿದ್ದಾರೆ. ಸಮುದಾಯ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹಿಳಾ ಸಬಲೀಕರಣವು ಪ್ರಮುಖವಾದದ್ದು. ಭಾರತದಲ್ಲಿ ಮಹಿಳಾ ನಾಯಕತ್ವವು ಸಾಮಾಜಿಕ, ಆರ್ಥಿಕ ಪ್ರಗತಿಯನ್ನು ಮುನ್ನಡೆಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಸ್ಥಳೀಯ ಮಟ್ಟದ ಸಮುದಾಯಗಳಿಂದ ಸರ್ಕಾರದ ಮಟ್ಟದವರೆಗೆ ಮಹಿಳೆಯರು ಬದಲಾವಣೆಯ ಪ್ರಮುಖ ಚಾಲಕರಾಗಿ ಕಾರ್ಯನಿರ್ವಹಿಸುತ್ತಾರೆ. ಅವರ ನಾಯಕತ್ವವನ್ನು ಬೆಂಬಲಿಸುವ ಮೂಲಕ ಸಕ್ರಿಯ ಒಳಗೊಳ್ಳುವಿಕೆ, ಸಮಾನತೆ ಮತ್ತು ಸುಸ್ಥಿರತೆಯನ್ನು ಉತ್ತೇಜಿಸಿ ‘ಮಹಿಳಾ ಅಭಿವೃದ್ಧಿಗಿಂತ ಮಹಿಳಾ ನೇತೃತ್ವದ ಅಭಿವೃದ್ಧಿಯ’ ಮೇಲೆ ಸರ್ಕಾರ ತನ್ನ ಗಮನ ಹರಿಸಬೇಕಿದೆ.

**ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಮಹಿಳಾ ಸಬಲೀಕರಣ:**

ಭಾರತದ ಸಂದರ್ಭಕ್ಕೆ ನೋಡುವುದಾದರೆ ಮಹಿಳೆಯರ ಶೋಷಣೆ, ಸಮಸ್ಯೆಗಳು, ಅವರ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆಗೆ ಸಂಬಂಧಿಸಿದಂತೆ ಅನೇಕರು ತಮ್ಮದೇ ಆದ ರೀತಿಯಲ್ಲಿ ಸೈದ್ಧಾಂತಿಕವಾಗಿ ಚಿಂತನೆ ಮತ್ತು ವಿಚಾರಗಳನ್ನು ರೂಪಿಸಿದ್ದಾರೆ ಹೊರತು ಅವರ

ಸಮಸ್ಯೆಗಳ ಪರಿಹಾರಕ್ಕೆ ಪ್ರಾಯೋಗಿಕವಾಗಿ ಪರಿಹಾರ ಸೂಚಿಸಿದವರು ಕೆಲವೇ ಮಹಾನ್ ವ್ಯಕ್ತಿಗಳು. ಅಂತವರ ಸಾಲಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಮೊದಲ ಸ್ಥಾನದಲ್ಲಿ ನಿಲ್ಲುತ್ತಾರೆ. ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿ 'ಹಿಂದೂ ಕಾನೂನು ಸಂಹಿತೆ'ಯನ್ನು ಸಿದ್ಧಪಡಿಸುವ ಮೂಲಕ ಮಹಿಳೆಯರಿಗೆ ಮೊದಲ ಬಾರಿಗೆ :

1. ಮೃತನಾದ ಗಂಡಸಿನ ಹೆಣ್ಣು ಮಕ್ಕಳಿಗೆ, ಗಂಡು ಮಕ್ಕಳಿಗೆ ಸಮನಾದ ಆಸ್ತಿಯ ಪಾಲು.
2. ವಿಧವೆಯರು ಪಡೆದ ಆಸ್ತಿಯ ಮೇಲೆ ಅವರಿಗೆ ಸಂಪೂರ್ಣ ಅಧಿಕಾರ.
3. ಬಹುಪತ್ನಿತ್ವದ ನಿರಾಕರಣೆ.
4. ಅಂತರ್ಜಾತಿಯ ವಿವಾಹಕ್ಕೆ ಅವಕಾಶ.
5. ಹಿಂದೂಗಳು ಅನ್ಯ ಜಾತಿಯ ಮಕ್ಕಳನ್ನು ದತ್ತು ಪಡೆದುಕೊಳ್ಳುವ ಅಧಿಕಾರ.
6. ಹೆಂಡತಿಗೆ ವಿವಾಹ ವಿಚ್ಛೇದನಕ್ಕೆ ಮನವಿ ಸಲ್ಲಿಸುವ ಹಕ್ಕು.
7. ಅವಿಭಜಿತ ಆಸ್ತಿ ಪದ್ಧತಿಯನ್ನು ವಿಸರ್ಜಿಸಿ, ವೈಯಕ್ತಿಕ ಆಸ್ತಿ ಪದ್ಧತಿಗೆ ಕಾನೂನು ಮಾನ್ಯತೆ ನೀಡುವ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಅಡಿಪಾಯ ಹಾಕಿದರು. (ಡಾ. ಎಸ್. ಜಾಫೆಟ್, 2017 ಅಂಬೇಡ್ಕರ್ ಅವರ ಚಿಂತನೆಗಳ ಪ್ರವೇಶಿಕೆ).

ಜೊತೆಗೆ ಸಂವಿಧಾನದಲ್ಲಿ ಅನೇಕ ಮಹಿಳಾ ಪರ ಕಾನೂನುಗಳನ್ನು ರಚಿಸುವ ಮೂಲಕ ಅವರಿಗೆ ಶಿಕ್ಷಣ, ಸಮಾನತೆ, ಸ್ವಾತಂತ್ರ್ಯ, ಹಕ್ಕುಗಳು, ಸೌಲಭ್ಯಗಳು ದೊರೆಯುವಂತೆ ಮಾಡಿದರು. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಗೆ ನೆರವಾಗುವಂತೆ ರಾಜಕೀಯ ಮೀಸಲಾತಿಯನ್ನು ನೀಡಿದರು. ಅಂಬೇಡ್ಕರ್ ಚಿಂತನೆಗಳು ಇಂದಿನ ಮಹಿಳಾ ಚಳುವಳಿಗೆ ತಾತ್ವಿಕ ಮಾರ್ಗ ತೋರಿಸುತ್ತವೆ ಹಾಗೂ ಅವರು ಮಹಿಳಾ ಸಬಲೀಕರಣವನ್ನು ಕೇವಲ ಕಲ್ಯಾಣ ಯೋಜನೆಗಳ ಮಟ್ಟಕ್ಕೆ ಸೀಮಿತಗೊಳಿಸದೆ, ಅದು ಸಾಮಾಜಿಕ ನ್ಯಾಯದ ಮೂಲಭೂತ ಅಂಶ ಎಂದು ಪರಿಗಣಿಸಿದರು. ಅದಕ್ಕಾಗಿ ಕಾನೂನುಬದ್ಧ ನೀತಿಗಳನ್ನು ರೂಪಿಸಿದರು. (Dr. Minara Yeasmin. Dr. BR Ambedkar's vision for Women Empowerment. IJGRT Volume–6 Issue 2 April–2018. ISSN:2320–2883). ಅಂಬೇಡ್ಕರ್ ಅವರು ಮಹಿಳೆಯರ ಕಲ್ಯಾಣದಿಂದ ಅವರ ಸಬಲೀಕರಣವನ್ನು ಸಾಧಿಸಬಹುದು ಎಂದು ಬಲವಾಗಿ ಪ್ರತಿಪಾದಿಸಿದರು. ಅದಕ್ಕಾಗಿಯೇ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರ ಮೇಲೆ ಆಗುತ್ತಿದ್ದ ಶೋಷಣೆಗಳಾದ ಬಾಲ್ಯ ವಿವಾಹ, ದೇವದಾಸಿಯಂತಹ ಅನ್ಯಾಯದ ಅಮಾನವೀಯ ಪದ್ಧತಿಗಳು, ಅಭದ್ರತೆ, ಪುರುಷ ಪ್ರಾಬಲ್ಯ, ಹಕ್ಕುಗಳ ಬಗೆಗಿನ ಅರಿವಿನ ಕೊರತೆ ಮೊದಲಾದವುಗಳ ಕಡೆ ಗಮನ ಹರಿಸಿದರು.

ರಾಜಕೀಯ ಶಕ್ತಿಯು ಎಲ್ಲ ಸಾಮಾಜಿಕ ಪ್ರಗತಿಯನ್ನು ಮತ್ತು ಮಹಿಳೆಯರ ಸಬಲೀಕರಣವನ್ನು ಸಾಧಿಸಲು ಇರುವ ಅತ್ಯಂತ ಶಕ್ತಿಶಾಲಿ ಸಾಧನಗಳಲ್ಲಿ ಒಂದಾಗಿದೆ. ರಾಜಕೀಯದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯು ಕೇವಲ ಪ್ರಜಾಪ್ರಭುತ್ವದ ಆದರ್ಶವನ್ನು ಪೂರೈಸುವುದಷ್ಟೇ ಅಲ್ಲದೆ ಸಾಮಾಜಿಕ ನ್ಯಾಯ, ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಪ್ರೇರಕ ಶಕ್ತಿಯಾಗಿದೆ. ಪ್ರಸ್ತುತ ಲೋಕಸಭೆಯಲ್ಲಿ 545 ಸದಸ್ಯರಲ್ಲಿ 74 ಮಹಿಳೆಯರು ಮತ್ತು ರಾಜ್ಯಸಭೆಯಲ್ಲಿ 245 ಸದಸ್ಯರಲ್ಲಿ 39 ಜನ ಮಹಿಳೆಯರು ಸಕ್ರಿಯರಾಗಿದ್ದು, ಜನಸಂಖ್ಯಾ ಪ್ರಮಾಣದ ಅನುಗುಣವಾಗಿ ಪ್ರಾತಿನಿಧ್ಯದ ದರವು ಕಡಿಮೆ ಇರುವುದನ್ನು ಗುರುತಿಸಬಹುದು. 'ಮಹಿಳಾ ಪ್ರಾತಿನಿಧ್ಯ' ಎಂದರೆ ರಾಜಕೀಯ, ವ್ಯವಹಾರ

ಮತ್ತು ಮಾಧ್ಯಮಗಳಂತಹ ಕ್ಷೇತ್ರಗಳಲ್ಲಿ ವಿಶೇಷವಾಗಿ ನಾಯಕತ್ವದ ಪಾತ್ರಗಳಲ್ಲಿ ಹಾಗೂ ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಮಹಿಳೆಯರು ಎಷ್ಟರ ಶೇಕಡವಾರು ಪ್ರಮಾಣದಲ್ಲಿ ತೊಡಗಿಕೊಂಡಿದ್ದಾರೆ ಎಂಬುದನ್ನು ಸೂಚಿಸುತ್ತದೆ. (Mousumi Terantinpi, Dr. Ruprekha Bordoloi. Active participation of Women in politics: driving force for a Viksit Bharath. ENRICH. ISSN-2984-8687, June 2025 Volume-3 Issue-6).

**ವಿಕಸಿತ ಭಾರತ ಮತ್ತು ಮಹಿಳಾ ಸಬಲೀಕರಣ:**

ಭಾರತವು ಸ್ವಾತಂತ್ರ್ಯದ ಶತಮಾನೋತ್ಸವದ ವೇಳೆಗೆ ಎಲ್ಲರನ್ನೂ ಒಳಗೊಂಡ ಪ್ರಗತಿಪರ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನು ಸ್ಥಾಪಿಸುವುದು ವಿಕಸಿತ ಭಾರತ @2047ರ ಆಶಯವಾಗಿದೆ. ಈ ದೃಷ್ಟಿಕೋನದ ಮುಖ್ಯ ವಿಷಯಗಳಲ್ಲಿ ಒಂದು ಮಹಿಳೆಯರ ಸಬಲೀಕರಣವಾಗಿದೆ. ಇದು ಶಿಕ್ಷಣ, ಉದ್ಯೋಗ, ಆರೋಗ್ಯ ರಕ್ಷಣೆ, ನಾಯಕತ್ವ ಮೊದಲಾದವುಗಳಿಗೆ ಸಮಾನ ಪ್ರವೇಶವನ್ನು ಖಚಿತಪಡಿಸುತ್ತದೆ. ನಿಜವಾದ ಅಭಿವೃದ್ಧಿ ಹೊಂದಿದ ಭಾರತದ ಗುರಿಯ ಸಾಕ್ಷಾತ್ಕಾರವು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಲಿಂಗ ಸಮಾನತೆಯನ್ನು ಸಾಧಿಸುವುದು ಮತ್ತು ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯನ್ನು ಪೋಷಿಸುವುದಾಗಿದೆ. ಮುಖ್ಯವಾಗಿ ವಿಕಸಿತ ಭಾರತದ ದೃಷ್ಟಿಕೋನವು ಮಹಿಳೆಯರ ಆರ್ಥಿಕ ಸಬಲೀಕರಣದ ಮೇಲೆ ಒತ್ತು ನೀಡಿದ್ದು, ಉದ್ಯಮಶೀಲತೆ, ಅನೌಪಚಾರಿಕ ಆರ್ಥಿಕತೆಯಲ್ಲಿ ಮಹಿಳೆಯರ ಉತ್ತೇಜನ, ಮಹಿಳೆಯರ ಆರ್ಥಿಕ ಬಲವರ್ಧನೆ, ಮಹಿಳಾ ನೇತೃತ್ವದ ಉದ್ಯಮವನ್ನು ಉತ್ತೇಜಿಸುವುದು, ಸುಲಭ ಸಾಲ ಸೌಲಭ್ಯಗಳು, ರಿಯಾಯಿತಿಗಳು, ಸ್ವಯಂ ಸಹಾಯ ಗುಂಪುಗಳನ್ನು ಬಲಪಡಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ (IJESRR. Volume 12 Issue-2 March April 2025 E-ISSN-2348-6457) (Women's Empowerment: A Key Key to Achieving Viksit Bharath 2047. Mrs. Jyoti, Ms. Shashi), ರಾಜಕೀಯ ಮತ್ತು ಆಡಳಿತಾತ್ಮಕ ನಾಯಕತ್ವದಲ್ಲಿ ಮಹಿಳೆಯರ ಬಲಿಷ್ಠ ಪ್ರಾತಿನಿಧ್ಯವೂ ವಿಕಸಿತ ಭಾರತಕ್ಕೆ ಅಗತ್ಯವಾಗಿದೆ. ಆ ಕಾರಣಕ್ಕಾಗಿಯೇ ಸರ್ಕಾರವು ಕೈಗೊಳ್ಳುವ ಬಹುತೇಕ ಯೋಜನೆಗಳು ಮಹಿಳೆಯರನ್ನು ಕೇಂದ್ರೀಕರಿಸಿ/ ಫಲಾನುಭವಿಗಳನ್ನಾಗಿಸಿ ಜಾರಿಗೊಳಿಸುತ್ತಿದೆ. ಇನ್ನು ರಾಜಕೀಯ ಭಾಗವಹಿಸುವಿಕೆಯು ಕೇವಲ ಮತದಾನ, ರಾಜಕೀಯ ಪಕ್ಷಗಳ ಸಂಘಟನೆ, ಪ್ರಚಾರ, ಚುನಾವಣೆ, ರಾಜಕೀಯ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದು ಮೊದಲಾದವುಗಳಿಗೆ ಸೀಮಿತವಾದದ್ದಲ್ಲ; ಬದಲಿಗೆ ನಿರ್ಧಾರ ಕೈಗೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುವುದಾಗಿದೆ. ರಾಜಕೀಯ ಪಕ್ಷಗಳು ಮಹಿಳಾ ಕೇಂದ್ರಿತವಾಗಿರದೆ ಮಹಿಳಾ ನಾಯಕತ್ವದ ಮೂಲಕ ನಡೆಯುತ್ತಿರಬೇಕು, ಇದಕ್ಕೆ ಸಕ್ರಿಯ ರಾಜಕೀಯ ಭಾಗವಹಿಸುವಿಕೆ ಎನ್ನಬಹುದು. ಮಹಿಳೆಯರು ಕೇವಲ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಕ್ಕೆ ಸೀಮಿತವಾಗಿರದೆ ಇತರೆ ಕ್ಷೇತ್ರಗಳಲ್ಲಿಯೂ ಸಕ್ರಿಯರಾಗಿದ್ದಾರೆ. ಅನೇಕ ವೀರ ವನಿತೆಯರು ಸೇನೆಯಲ್ಲಿ ಸೇವೆ ಸಲ್ಲಿಸುವುದಷ್ಟೇ ಅಲ್ಲದೆ ಸೇನೆ ಕೈಗೊಳ್ಳುವ ಪ್ರಮುಖ ಸೇನಾ ಕಾರ್ಯಾಚರಣೆಗಳನ್ನು ಮುನ್ನಡೆಸುವ ಹಂತದಲ್ಲಿ ಮಹಿಳೆಯರು ಕಾರ್ಯನಿರ್ವಹಿಸುತ್ತಿರುವುದು ಉಳಿದ ಮಹಿಳಾ ಸಮೂಹಕ್ಕೆ ಪ್ರೇರಕ ಶಕ್ತಿಯಾಗಿದೆ.

**ಸಂವಿಧಾನ ಮತ್ತು ಮಹಿಳಾ ಸಬಲೀಕರಣ:**

ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಿತಿಯು ಐತಿಹಾಸಿಕವಾಗಿ ಅಸಮಾನತೆಯಿಂದ ಕೂಡಿದ್ದು, ಅದನ್ನು ಸಂವಿಧಾನಾತ್ಮಕವಾಗಿ ತೊಡೆದು ಹಾಕುವ ಕೆಲಸವನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ಮಾಡಿದರು. ಆ ಮೂಲಕ ಸಾಮಾಜಿಕ ಪರಿವರ್ತನೆಗೆ ದಾರಿ ಮಾಡಿಕೊಟ್ಟರು. ಮಹಿಳೆಯರ ಹಿಂದುಳಿದಿರುವಿಕೆಗೆ ಕಾರಣವಾಗಿದ್ದ ಸಾಮಾಜಿಕ ಅಸಮಾನತೆ, ಶಿಕ್ಷಣದ ಕೊರತೆ, ಆರ್ಥಿಕ ಅವಲಂಬನೆ ಮತ್ತು ರಾಜಕೀಯ ಭಾಗವಹಿಸುವಿಕೆಯ ಕೊರತೆ ಮೊದಲಾದವುಗಳನ್ನು ಕಾನೂನಾತ್ಮಕವಾಗಿಯೇ ಪರಿಹರಿಸಿ, ಮಹಿಳೆಯರ ಸಬಲೀಕರಣಕ್ಕೆ ಅಗತ್ಯವಾದ ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯ ತತ್ವಗಳನ್ನು ಸಂವಿಧಾನವು ಒಳಗೊಂಡಿದೆ ಮತ್ತು ಪ್ರಭುತ್ವಗಳು ಅವುಗಳನ್ನು ಕಾರ್ಯಗತಗೊಳಿಸುತ್ತಾ ಬಂದಿವೆ.

**ಸಂವಿಧಾನದಲ್ಲಿ ಮಹಿಳೆಯರ ಹಕ್ಕುಗಳು:**

- **ಸಮಾನತೆಯ ಹಕ್ಕು:**
  - » 14ನೇ ವಿಧಿ: ಕಾನೂನಿನ ಮುಂದೆ ಸಮಾನತೆ.
  - » 15(1)ನೇ ವಿಧಿ: ಲಿಂಗದ ಆಧಾರದ ಮೇಲೆ ಭೇದಭಾವ ನಿಷೇಧ.
  - » 15(3)ನೇ ವಿಧಿ: ಮಹಿಳೆಯರ ಪರ ವಿಶೇಷ ವ್ಯವಸ್ಥೆಗಳಿಗೆ ಅವಕಾಶ.
- ಸ್ವಾತಂತ್ರ್ಯದ ಹಕ್ಕು : 19ನೇ ವಿಧಿ: ವೃತ್ತಿ ಆಯ್ಕೆ, ಅಭಿವ್ಯಕ್ತಿ ಮತ್ತು ಸಂಘಟನೆಯ ಸ್ವಾತಂತ್ರ್ಯ ಮಹಿಳೆಯರ ಸಾರ್ವಜನಿಕ ಜೀವನದಲ್ಲಿ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತದೆ.
- ಶೋಷಣೆಯ ವಿರುದ್ಧದ ಹಕ್ಕು : 23 ಮತ್ತು 24ನೇ ವಿಧಿಗಳು: ಮಾನವ ವ್ಯಾಪಾರ, ಬಲವಂತದ ದುಡಿಮೆ, ಬಾಲಕಾರ್ಮಿಕತೆ ವಿರುದ್ಧದ ನಿಯಮಗಳು ಮಹಿಳೆಯರ ಗೌರವವನ್ನು ಕಾಪಾಡುತ್ತವೆ.
- ರಾಜ್ಯನೀತಿ ನಿರ್ದೇಶಕ ತತ್ವದಲ್ಲಿ ಮಹಿಳಾ ಕಾಳಜಿ:
  - » 39(ಡಿ): ಸಮಾನ ಕೆಲಸಕ್ಕೆ ಸಮಾನ ವೇತನ.
  - » 42ನೇ ವಿಧಿ: ಕೆಲಸ ಮತ್ತು ಮಾತೃತ್ವ ಪರಿಹಾರದ, ನ್ಯಾಯಯುತ ಮತ್ತು ಮಾನವೀಯ ಪರಿಸ್ಥಿತಿಗಳನ್ನು ಒದಗಿಸುವುದು.
  - » 44ನೇ ವಿಧಿ: ಏಕರೂಪ ನಾಗರಿಕ ಸಂಹಿತೆ (ಲಿಂಗ ಸಮಾನತೆಗಾಗಿ ಚರ್ಚಿತ ಅಂಶ).
- ರಾಜಕೀಯ ಮೀಸಲಾತಿ ಮತ್ತು ಅವಕಾಶಗಳು:
  - » ರಾಜಕೀಯದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಗೆ ಪೂರಕವಾಗುವಂತೆ ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಕಾಯ್ದೆಗಳು ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇಕಡ 50 ರಷ್ಟು ಮೀಸಲಾತಿ ಒದಗಿಸಿವೆ.
  - » ಕೇಂದ್ರ ಸರ್ಕಾರವು 2023ರಲ್ಲಿ ಅಂಗೀಕರಿಸಿದ 'ನಾರಿ ಶಕ್ತಿ ವಂದನ ಅಧಿನಿಯಮ' ಕಾಯ್ದೆಯು ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಶೇಕಡ 33ರಷ್ಟು ರಾಜಕೀಯ ಮೀಸಲಾತಿಯನ್ನು ಖಚಿತಪಡಿಸುವ ಮೂಲಕ

ರಾಜಕೀಯದಲ್ಲಿ ಮಹಿಳೆಯರು ಹೆಚ್ಚು ಭಾಗವಹಿಸುವಂತೆ ಮಾಡಿ ಅವರ ಬಲವರ್ಧನೆಗೆ ಮುಂದಾಗಿವೆ. (ಎಂ. ಲಕ್ಷ್ಮೀಕಾಂತ್ 2024 ಭಾರತೀಯ ರಾಜ್ಯ ವ್ಯವಸ್ಥೆ McGraw Hill Education (India) Private Limited. Chennai).

**ಉಪಸಂಹಾರ:**

ಭಾರತದಲ್ಲಿ ಮಹಿಳಾ ಸಬಲೀಕರಣವು ಇನ್ನೂ ಚರ್ಚಾಸ್ಪದ ವಿಷಯವಾಗಿಯೇ ಉಳಿದಿದೆ ಏಕೆಂದರೆ ಅವರ ರಾಜಕೀಯ ಭಾಗವಹಿಸುವಿಕೆ ಮತ್ತು ಸಾಮಾಜಿಕ, ಆರ್ಥಿಕ ಸಬಲೀಕರಣವು ನಿಗದಿತ ಗುರಿಯನ್ನು ತಲುಪುವಲ್ಲಿ ವಿಫಲವಾಗಿದೆ. ಸ್ಥಳೀಯ ಮಟ್ಟದ ಚುನಾವಣೆಯಲ್ಲಿ ಶೇಕಡ 50ರಷ್ಟು ಮೀಸಲಾತಿ ನೀಡಿದ್ದರೂ ಅವರ ಸಕ್ರಿಯ ಭಾಗವಹಿಸುವಿಕೆಯ ಬದಲಿಗೆ ನಾಮಮಾತ್ರ ಭಾಗವಹಿಸುವಿಕೆಯನ್ನು ಕಾಣುತ್ತಿದ್ದೇವೆ. ಈ ರೀತಿಯ ಪರಿಸ್ಥಿತಿಗಳು ಬದಲಾಗಬೇಕಿದೆ. ಮಹಿಳಾ ಸಬಲೀಕರಣವು ಕೇವಲ ಮಹಿಳೆಯರ ಮೇಲೆ ಮಾತ್ರ ಪ್ರಭಾವ ಬೀರದೆ ಇಡೀ ಸಮಾಜದ ಪ್ರಗತಿಯ ಮೇಲೆ ಪ್ರಭಾವವನ್ನು ಬೀರುತ್ತದೆ. ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಮಹಿಳೆಯರ ಸಾಮರ್ಥ್ಯವನ್ನು ಹೊರಹಾಕಲು ಸರ್ಕಾರಗಳು, ರಾಜಕೀಯ ಪಕ್ಷಗಳು, ನಾಗರಿಕ ಸಮಾಜದ ಸಂಸ್ಥೆಗಳು ಮತ್ತು ನಾಗರಿಕರಿಂದ ಸಾಮೂಹಿಕ ಪ್ರಯತ್ನದ ಅಗತ್ಯವಿದೆ. ಮಹಿಳೆಯರಿಗಿರುವ ಎಲ್ಲಾ ವಲಯಗಳಲ್ಲಿನ ಅವಕಾಶಗಳನ್ನು ಮುಕ್ತವಾಗಿ ತೆರೆಯುವ ಮೂಲಕ ಸಬಲೀಕರಣವನ್ನು ಸಾಧಿಸಬಹುದು. ಮಹಿಳಾ ಹಕ್ಕುಗಳು, ಅವಕಾಶಗಳು, ಅವರಿಗಿರುವ ಕಾನೂನು ನೆರವುಗಳನ್ನು ತಿಳಿಸುವಂತಹ ಕೆಲಸವನ್ನು ಇನ್ನು ಹೆಚ್ಚಿನದಾಗಿ ನಾಗರಿಕ ಸಮಾಜ ಮತ್ತು ಸಾಮಾಜಿಕ ಸಂಸ್ಥೆಗಳು ಮಾಡಬೇಕಿದೆ. ಸಂವಿಧಾನದಲ್ಲಿ ದೃಢಪಡಿಸಿರುವ ಮಹಿಳಾಪರ ಕಾನೂನುಗಳನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಮಹಿಳಾ ಸಮಾಜವು ಸ್ವಾವಲಂಬನೆಯತ್ತ ಸಾಗಬಹುದು. ಒಂದು ಹೆಣ್ಣಿನ ಪ್ರಗತಿಯು ಇಡೀ ಆ ಸಮುದಾಯದ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ 15.
2. ಎಸ್. ಜಾಫೆಟ್, ಅಂಬೇಡ್ಕರ್ ಅವರ ಚಿಂತನೆಗಳ ಪ್ರವೇಶಿಕೆ, 2017.
3. ಎಂ. ಲಕ್ಷ್ಮೀಕಾಂತ್, 2024, ಭಾರತೀಯ ರಾಜ್ಯ ವ್ಯವಸ್ಥೆ, McGraw Hill Education (India) Private Limited. Chennai.
4. Shirur, S. S. (2023). Dr. B. R. Ambedkar's role in women empowerment. International Journal for Multidisciplinary Research (IJFMR), 5(4). doi.org.
5. Kumar, S. (2021). Ambedkar's vision of women: Empowerment, equality, and social justice. Research Hub International Multidisciplinary Research Journal (RHIMRJ), 8(5), 15–18.
6. Jyoti, & Shashi. (2024). Women's empowerment: A key key to achieving Viksit Bharat 2047. Educational Administration: Theory and Practice, 30(5), 4501–4507. kuey.net.
7. Yeasmin, M. (2024). Dr. B. R. Ambedkar's vision for women empowerment. International Journal of Research Publication and Reviews, 5(1), 3290–3294. ijrpr.com.
8. Singh, S., & Kumar, S. (2024). Women empowerment and gender equality in India: A strategic imperative for Viksit Bharat. International Journal of Social Science and Economic Research (IJSSER), 9(1), 108–117. doi.org.
9. Naik, Z. H. (2017). Empowerment of women through political participation in India. International Journal of Academic Research and Development, 2(6), 728–731.
10. Lavanya, K. (2024). Breaking barriers: Empowering women in political participation and leadership. International Journal of Creative Research Thoughts (IJCRT), 12(6), g353–g362. https://ijcrt.org/papers/IJCRT2406723.pdf.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.